<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>

ಸಿ.ಸಿ. ನಂ. 31825-2018

ಸಿಡಬ್ಲೂ -4ಪಿಡಬ್ಲೂ-3

| | |
|---|---|
| ಸಾಕ್ಷಿದಾರರ ಹೆಸರು | : ಜಾನಕಿ |
| ಗಂಡನ ಹೆಸರು | : ಚಂದ್ರಶೇಖರ |
| ವಯಸ್ಸು | : 37 ವರ್ಷ |
| ಕೆಲಸ | : ಗೃಹಿಣಿ |
| ವಾಸ | : ಡಿಜಿ ಹಳ್ಳಿ, ಬೆಂಗಳೂರು |

<u>ಸಾಕ್ಷಿಯನ್ನು ದಿನಾಂಕಃ 06-08-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>
<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ಚಾಸಾ 1 ರವರು ನನ್ನ ಅಕ್ಕ, ಚಾಸಾ 5 ರವರು ನನ ಗಂಡ, ಆರೋಪಿ ಗೊತ್ತು. ದಿ. 27-10-2017 ರಂದು ನಾನು ಮತ್ತು ಚಾಸಾ 1 ರವರು ನಮ್ಮ ಅಡುಗೆ ಮನೆಯಲ್ಲಿದ್ದಾಗ ಆರೋಪಿಯು ಮಧ್ಯಾನ್ನದ ಸಮಯಕ್ಕೆ ನಮ್ಮ ಮನೆಗೆ ಬಂದು ಜೋರಾಗಿ ಕಿರುಚಿಕೊಂಡು, ಕಿಟಕಿ ಗಾಜುಗಳನ್ನು ಒಡೆದಿರುತ್ತಾರೆ, ಮನೆಯ ಒಳಗಡೆ ಬಂದು ಅವಾಚ್ಯ ಶಬ್ದಗಳಿಂದ ನಿಮ್ಮ ಅಮ್ಮನ್, ಸಾಯಿಸಿ ಬಿಡುತ್ತೇನೆ ಎಂದು ಬೈದು ಹೊರಗಡೆ ಹೋಗಿರುತ್ತಾರೆ. ಈ ವಿಚಾರದಲ್ಲಿ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ</u>

ಆರೋಪಿಯು ಮಧ್ಯಾನ್ನ 01-2 ಗಂಟೆಗೆ ಮನೆಗೆ ಬಂದಿರುತ್ತಾರೆ. ಅದೇ ದಿವಸ ಪೋಲೀಸರಿಗೆ ದೂರನ್ನು ಕೊಟ್ಟಿರುತ್ತೇವೆ. ಸಮಯ ಗೊತ್ತಿಲ್ಲ. ಆರೋಪಿಯು ನಮ್ಮ ಮನೆಗೆ ಬಂದಿರುವುದಿಲ್ಲ, ಯಾವುದೇ ಗಲಾಟೆ ವಾಡಿರುವುದಿಲ್ಲ ಎಂದರೆ ಸರಿಯಲ್ಲ. ಬೈದಿಲ್ಲ ಎಂದರೆ ಸರಿಯಲ್ಲ. ಅರುಣ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನಗೆ ಪರಿಚಯ ಇರಲಿಲ್ಲ. ಅರುಣಗೂ ಈ ಕೇಸಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ